ಹಾಗೂ ಎಂದಿನಿಂದ ಅವುಗಳು ಬಾಕಿ ಉಳಿದಿರುತ್ತದೆ;

ಇ) ಪ್ರಸ್ತುತ ಸಾಲಿನಲ್ಲಿ ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಲಾಗುವುದೇ;

ಈ) ಹಾಗಿದ್ದಲ್ಲಿ ಮಾಗಡಿ ತಾಲ್ಲೂಕಿನಲ್ಲಿ ಸದರಿ ಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ತೆರೆಯಲಾಗುವುದು?

ಶ್ರೀ ಕೆ.ಎನ್. ನಾಗೇಗೌಡ
(ಪಶುಸಂಗೋಪನಾ ಸಚಿವರು)

ಇದೆ.

ರಾಜ್ಯಾದ್ಯಂತ ಒತ್ತಾಯಗಳು ಬಂದಿದ್ದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಭಾಗಶಃ ಈಡೇರಿಸಲಾಗುವುದು.

ಸ್ಥಳಗಳನ್ನು ಗುರುತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: ರಾಜ್ಯದಲ್ಲಿ ಆರೋಗ್ಯ ವಿಶ್ವವಿದ್ಯಾಲಯ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೯: (೬೩೪)

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ಆರೋಗ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದೇ?

ಆ) ಹಾಗಿದ್ದಲ್ಲಿ; ಯಾವ ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದು?

ಇ) ಅದನ್ನು ಯಾವ ಜಿಲ್ಲೆಯಲ್ಲಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆ?

ಈ) ಅದನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಸರ್ಕಾರ ಮುಂದೆ ಬರುವುದೇ?

ಉ) ಅದಕ್ಕಾಗಿ ಏನಾದರೂ ಪೂರ್ವಭಾವಿ ಕೆಲಸಗಳು ಪ್ರಾರಂಭವಾಗಿರುವುದೇ?

ಶ್ರೀ ಜಿ. ರಾಮಕೃಷ್ಣ
(ವೈದ್ಯಕೀಯ ಶಿಕ್ಷಣ ಸಚಿವರು)

ಪರಿಶೀಲಿಸಲಾಗುತ್ತಿದೆ.

ಪರಿಶೀಲಿಸಲಾಗುತ್ತಿದೆ.

ಡಾ. ಹೆಚ್. ನರಸಿಂಹಯ್ಯ ಸಮಿತಿಯ ಭಾಗ-೨ರಲ್ಲಿ ಸಲ್ಲಿಸಿರುವ ವರದಿಯಲ್ಲಿ ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸಲಹೆ ನೀಡಿದ್ದು, ಸದರಿ ಸಲಹೆಯನ್ನು ಪರಿಶೀಲಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪ ಕುಲಪತಿಗಳಾದ ಡಾ. ಹೆಚ್. ನರಸಿಂಹಯ್ಯ ಇವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂ. ಆಕುಕ ೧೦೨ ಎಂಎಂಇ ೭೯.. ದಿನಾಂಕ ೭-೧೧-೮೭ರಲ್ಲಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ತಮ್ಮ ಮೊದಲ ಭಾಗದ ವರದಿಯನ್ನು ಡಿಸೆಂಬರ್ ೧೯೯೧ರಲ್ಲಿ ಸಲ್ಲಿಸಿತು. ಅದರಂತೆ ಸರ್ಕಾರಿ ಆದೇಶ ಸಂ:ಆಕುಕ ೨೮ ಎಂಎಸ್‌ಎಫ್ ೯೨, ದಿನಾಂಕ:೧೭-೭-೯೨ರಂತೆ ಒಪ್ಪಿಗೆ ದೊರಕಿದ್ದು, ಇದೇ ಆದೇಶದಲ್ಲಿ ಸರ್ಕಾರವು ಆರೋಗ್ಯ ವಿಶ್ವವಿದ್ಯಾನಿಲಯದ ಪ್ರಾಥಮಿಕ ವಿವರಗಳಿಗಾಗಿ ವಿಶೇಷಾಧಿಕಾರಿ ಹುದ್ದೆಯನ್ನು ಮಂಜೂರು ಮಾಡಿದೆ. ಡಾ. ಹೆಚ್. ನರಸಿಂಹಯ್ಯ ಸಮಿತಿಯು ತಮ್ಮ ಎರಡನೇ ಭಾಗದ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಸರ್ಕಾರವು ಒಪ್ಪಿಕೊಂಡು ತೆರೆಯಬೇಕೆಂದಿರುವ

ವಿಶ್ವವಿದ್ಯಾನಿಲಯದ ಕರಡು ಬಿಲ್‌ನ್ನು ಸಲ್ಲಿಸಿರುತ್ತದೆ. ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ವಿಶೇಷಾಧಿಕಾರಿಗಳು ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಆಯವ್ಯಯ ಅಂದಾಜುಗಳ ತಃಖ್ತೆಯನ್ನು ಸಲ್ಲಿಸಿರುತ್ತಾರೆ. ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪಿಸಲು ಅಗತ್ಯವಾದ ಆಯವ್ಯಯ ವ್ಯವಸ್ಥೆ ಕರಡು ರೆಗ್ಯುಲೇಷನ್ ರಚನೆ ಮತ್ತು ಇನ್ನಿತರ ಕರ್ತವ್ಯಾಚರಣೆಯ ಸಾಧಕ ಭಾದಕಗಳನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ವಿಷಯ:- ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕ ವಸೂಲಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೯೦: (೫೧೪)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ)
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಖಾಸಗಿಯವರು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ.ಜಿ. ರಾಮಕೃಷ್ಣ
(ವೈದ್ಯಕೀಯ ಶಿಕ್ಷಣ ಸಚಿವರು)

ಇಲ್ಲ.

ಕರ್ನಾಟಕ ಕ್ಯಾಪಿಟೇಷನ್ ಶುಲ್ಕ ರದ್ದಿತಿ ಅಧಿನಿಯಮ ೧೯೮೪, ನಿಯಮ ೫ ಉಪ ನಿಯಮ (೧)ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಆಕುಕ ೧೦೨ ಎಂಎಸ್‌ಎಫ್ ೮೭, ದಿನಾಂಕ ೫.೭.೧೯೮೯ರ ಪ್ರಕಾರ ಪರಿಷ್ಕೃತ ಬೋಧನಾ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ.

ಶ್ರೀ ಸಿ. ಬೈರೇಗೌಡ:- ನಾನು ಮತ್ತು ನಮ್ಮ ಸ್ನೇಹಿತರಾದ ಶ್ರೀ ವೈ.ಕೆ. ರಾಮಯ್ಯನವರು ಇನ್ನೂ ಕೆಲವು ಸ್ನೇಹಿತರು ಈ ರೇಷ್ಮೆ ಗೂಡಿನ ಬೆಲೆಯನ್ನು ಇಳಿಸಿರುವ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಎಲ್ಲಾ ಸೇರಿ ಅಡ್ಜರ್ನ್‌ಮೆಂಟ್ ಮೋಷನನ್ನು ಕಳುಹಿಸಿದ್ದೇವೆ. ರೇಷ್ಮೆ ಗೂಡು ದರ ಎಲ್ಲಾ ಕಡಿಮೆಯಾಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮ್ಮ ಕೊಠಡಿಗೆ ಬಂದು ಮೂರು ದಿವಸದಿಂದಲೂ ನಿಲುವಳಿ ಸೂಚನೆಯಬಗ್ಗೆ ಕೇಳುತ್ತಿದ್ದೇನೆ. ತಮಗೆ ಗೊತ್ತಿರುವ ಹಾಗೆ ನವೆಂಬರ್ ೧೬,೧೭,೧೮ ಬಿದ್ದಂಥ ಭಾರಿ ಮಳೆಯಿಂದ ನೆರೆ ಹಾವಳಿಯಿಂದ ಸರ್ಕಾರವೇ ಒಪ್ಪಿಕೊಂಡಿರುವ ಪ್ರಕಾರ ಸಮಾರು ೨ ಲಕ್ಷದ ೨೫ ಸಾವಿರ ಹೆಕ್ಟೇರ್ ಬೆಳೆ ಸಂಪೂರ್ಣ ನಾಶವಾಗಿದೆ. ಸರ್ಕಾರ ಪರಿಹಾರ ಕೊಡುತ್ತೇವೆ ಎಂದು ಹೇಳಿ ಈಗಾಗಲೇ ಮೂರು ತಿಂಗಳು ಕಳೆದರೂ ಏನೂ ಪರಿಹಾರವನ್ನು ಕೊಟ್ಟಿಲ್ಲ ಸ್ವಾಮಿ ಲಕ್ಷಾಂತರ ಮನೆಗಳು ನೆಲಸಮವಾಗಿವೆ. ಇದರ ಬಗ್ಗೆ ನಿಲುವಳಿ ಸೂಚನೆ ಮೂಲಕ ದೀರ್ಘವಾದಂಥ ಚರ್ಚೆಯಾಗಿ ಸರ್ಕಾರ ಅದಕ್ಕೆ ಪರಿಹಾರ ಒದಗಿಸಿಕೊಡಬೇಕಾಗುತ್ತದೆ. ಜನವರಿ ತಿಂಗಳಲ್ಲಿ ಸಾಕಷ್ಟು ಚರ್ಚೆಯಾಯಿತು.